ಕ್ರಮಗಳ ಬಗ್ಗೆ ಚರ್ಚಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ದಿ: ೩-೯-೦೧ರಂದು ಸಭೆ ನಡೆಸಿ ಅದರಂತೆ ಕಾರ್ಖಾನೆಯು ಕಳೆದ ಮೂರು ಹಂಗಾಮುಗಳಿಂದ ಪಾವತಿಸಬೇಕಾದ ರೈತರ ಕಬ್ಬಿನ ಬಿಲ್ಲು ಪಾವತಿಗಾಗಿ ಕೈಗೊಳ್ಳಬಹುದಾದ ಕ್ರಮವನ್ನು ಸರ್ಕಾರಕ್ಕೆ ವರದಿ ಮಾಡಲು ರಾಜ್ಯ ಅಪೆಕ್ಸ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ರೈತರಿಗೆ ಪಾವತಿಸಬೇಕಾದ ಕಬ್ಬಿನ ಬಿಲ್ಲು ಬಾಕಿ ಪಾವತಿಸಲು ಅನುಕೂಲವಾಗುವಂತೆ ಹಾಗೂ ಬೆಳಗಾಂ ಡಿ.ಸಿ.ಸಿ. ಬ್ಯಾಂಕಿಂದ ಪಡೆದಿರುವ ಸುಮಾರು ರೂ.45.62 ಕೋಟಿ ಒಂದೇ ಕಂತಿನಲ್ಲಿ ಮರುಪಾವತಿಸಲು ರೂಪುರೇಷೆಗಳನ್ನು ಅಳವಡಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸಭೆಯಲ್ಲಿ ಸೂಚಿಸಲಾಗಿತ್ತು. ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಂದ ಯಾವುದೇ ಸೂಕ್ತ ಪ್ರಸ್ತಾವನೆಯು ಈ ನಿಟ್ಟಿನಲ್ಲಿ ಬಾರದೆ ಇದ್ದ ಪ್ರಯುಕ್ತ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಳ್ಳಲಾಗಿದೆ. ಸರ್ಕಾರದ ಆದೇಶ ಸಂ: ಸಮತೂ:೨೫೭ : ಸಸಕಾ : ೯೯ ದಿ: ೧೦-೩-೨೦೦೦ ರ ಪ್ರಕಾರ ಈ ಕಾರ್ಖಾನೆಗೆ ಮತ್ತೆ ಸಾಲ ಪಡೆಯಲು ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಸರ್ಕಾರದ ಖಾತರಿ ನೀಡಲಾಗಿದೆ. ಸದರಿ ಆದೇಶದ ಷರತ್ತುಗಳ ಪೈಕಿ ಜಿಲ್ಲಾಧಿಕಾರಿಗಳು, ಬೆಳಗಾಂ, ಇವರ ಉಸ್ತುವಾರಿಯಲ್ಲಿ ಹಣಕಾಸು ವ್ಯವಹಾರಗಳನ್ನು ನಿರ್ವಹಿಸಬೇಕೆಂಬುದಿದ್ದು, ಈ ವ್ಯವಹಾರ ನಿರ್ವಹಣೆಯಲ್ಲಿ ಕಾರ್ಖಾನೆಯ ಆಡಳಿತ ಮಂಡಳಿಯು ಸಹಕಾರ ನೀಡುತ್ತಿಲ್ಲವೆಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ. ಕಾರ್ಖಾನೆಯು ಸಕ್ಕರೆ ದಾಸ್ತಾನಿನ ಮೇಲೆ ಒತ್ತೆ ಸಾಲ ಪಡೆಯಲು ಅನುಕೂಲವಾಗುವಂತೆ ಸರ್ಕಾರ ಗ್ಯಾರಂಟಿ ನೀಡಿದೆ. ಆದರೆ ಕೆಲವು ತಾಂತ್ರಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಸಾಲ ವಿಮುಗಡೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಚಿಂತನೆ ನಡೆದಿದೆ.

ದಿನಾಂಕ 26-3-2002ರ ಬುಧವಾರದ ಪ್ರಶ್ನೋತ್ತರ ಅನುಬಂಧ IX

ಹುಲಸೂರು ಕ್ಷೇತ್ರದ ಹಳ್ಳಿಖೇಡ್ (ಬಿ ಗ್ರಾಮ) ಪಂಚಾಯತಿಯನ್ನು ಪಟ್ಟಣ ಪಂಚಾಯ್ತಿಯನ್ನಾಗಿ ಮೇಲ್ದರ್ಜೆಗೇರಿಸುವುದು.

151(2077) ಶ್ರೀ ರಾಜೇಂದ್ರ ವರ್ಮ (ಹುಲಸೂರು) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಲಸೂರು ಮತಕ್ಷೇತ್ರದ ವ್ಯಾಪ್ತಿಗೆ ಬರುವ ಹಳ್ಳಿಖೇಡ್ (ಬಿ ಗ್ರಾಮ) ಪಂಚಾಯ್ತಿಯನ್ನು ಪಟ್ಟಣ ಪಂಚಾಯ್ತಿಯನ್ನಾಗಿ ಮೇಲ್ದರ್ಜೆಗೆ ಏರಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ, ಈ ಗ್ರಾಮದಲ್ಲಿ ಸುಮಾರು ಇಪ್ಪತ್ತೇಳು ಸಾವಿರ ಜನಸಂಖ್ಯೆ ಇದ್ದು 41 ಗ್ರಾಮ ಪಂಚಾಯ್ತಿ ಸದಸ್ಯರಿದ್ದು, ರಾಜ್ಯ ಹಾಗೂ ಕೇಂದ್ರ ಸರ್ಕಾರದ

ಕಛೇರಿ ಹಾಗೂ ಬ್ಯಾಂಕುಗಳಿದ್ದು, ಹಾಗೂ ಸಹಕಾರಿ ಪತ್ತಿನ ಕಾರ್ಖಾನೆ ಇದ್ದು ರಾಜ್ಯದಲ್ಲಿಯೇ ಅತ್ಯಂತ ದೊಡ್ಡ ಗ್ರಾಮ ಪಂಚಾಯ್ತಿಯಾಗಿರುವುದು ನಿಜವಲ್ಲವೆ;

(ಇ) ಹಾಗಿದ್ದಲ್ಲಿ ಈ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯ್ತಿಯನ್ನಾಗಿ ಮೇಲ್ದರ್ಜೆಗೆ ಏರಿಸಲು ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳು ಇದ್ದರೂ ಸಹ ಇದುವರೆಗೂ ಈ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯ್ತಿಯನ್ನಾಗಿ ಮೇಲ್ದರ್ಜೆಗೆ ಏರಿಸದಿರಲು ಕಾರಣಗಳೇನು? ಈ ವಿಷಯದಲ್ಲಿ ಸರ್ಕಾರವು ಯಾವ ನಿಲುವನ್ನು ತಾಳಿದೆ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜ್ಯ ಸಚಿವರು) :—

(ಅ) ಇಲ್ಲ.

(ಆ) ಹುಮ್ನಾಬಾದ್ (ಬಿ) ಗ್ರಾಮ ಪಂಚಾಯ್ತಿಯನ್ನು ಬೀದರ್ ಜಿಲ್ಲೆಯಲ್ಲಿ ಅತೀ ದೊಡ್ಡ ಗ್ರಾಮ ಪಂಚಾಯಿತಿಯಾಗಿರುವುದು ನಿಜವಿದೆ. ಅಲ್ಲಿನ ಜನ ಸಂಖ್ಯೆ 16,268 ಆಗಿರುತ್ತದೆ.

(ಇ) ಈ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯ್ತಿಯನ್ನಾಗಿ ಪರಿವರ್ತಿಸುವ ಬಗ್ಗೆ ಜಿಲ್ಲಾಧಿಕಾರಿಯವರಿಂದ ವರದಿ ಪಡೆದು ನಿಯಮಾನುಸಾರ ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಪ್ರಮಾಣ.

153(2258) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ರಾಜ್ಯದಲ್ಲಿ ಈ ವರ್ಷ ಉಂಟಾಗಿರುವ ವಿದ್ಯುಚ್ಛಕ್ತಿ ಕೊರತೆ ಪ್ರಮಾಣ ಎಷ್ಟು;

(ಆ) ಪ್ರಸ್ತುತ ರಾಜ್ಯದಲ್ಲಿ ಬೇಡಿಕೆಯಿರುವ ವಿದ್ಯುಚ್ಛಕ್ತಿ ಪ್ರಮಾಣ ಎಷ್ಟು;

(ಇ) ಯಾವ ಯಾವ ರಾಜ್ಯಗಳಿಂದ ವಿದ್ಯುತ್ ಖರೀದಿಸಲಾಗುತ್ತಿದೆ; (ಪ್ರಮಾಣವಾರು ವಿವರಗಳನ್ನು ನೀಡುವುದು)

(ಈ) ಹೊರ ರಾಜ್ಯಗಳಿಂದ ಖರೀದಿಸುತ್ತಿರುವ ವಿದ್ಯುತ್‌ಗೆ ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; (ರಾಜ್ಯಗಳವಾರು ವಿವರ ನೀಡುವುದು)?